ಓ.ಎಸ್. 150/2018
ಪಿ.ಡಬ್ಲ್ಯೂ-3

ದಿನಾಂಕಃ **11.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಬಿ.ಎಂ.ವಕೀಲರಿಂದಃ

ನನಗೆ ಸುಮಾರು 20 ವರ್ಷಗಳಿಂದ ನ್ಯಾಯಾಲಯಕ್ಕೆ ಬಂದು ಹೋಗಿ ನನ್ನ ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುವುದರಿಂದ ನ್ಯಾಯಾಲಯದ ಪ್ರಕರಣದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನನಗೆ ತಿಳಿದಂತೆ ವಾದಿ ಚಿಕ್ಕರಂಗನಾಯ್ಕರವರ ವಿರುದ್ಧ ಈ ದಾವೆಯನ್ನು ಹೂಡಿರುತ್ತಾರೆ. ಚಿಕ್ಕರಂಗನಾಯ್ಕರವರ ಮನೆ ಮೊದಲು ಊರಿನಲ್ಲಿತ್ತು ಈಗ ಹೊಲದಲ್ಲಿ ಕಟ್ಟಿಕೊಂಡಿರುತ್ತಾರೆ.

**2.** ದಾವಾ ಸ್ವತ್ತುಗಳನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತುಗಳಿಂದ ಪ್ರತಿವಾದಿಯ ಮನೆ ದಕ್ಷಿಣ ಮತ್ತು ಪಶ್ಚಿಮದ ಮೂಲೆಯಿಂದ ಸುಮಾರು 50 ಮೀಟರ್ ದೂರದಲ್ಲಿರುತ್ತದೆ. ದಾವಾ ಸ್ವತ್ತು ಮತ್ತು ಪ್ರತಿವಾದಿಯ ಮನೆಯ ಮಧ್ಯೆ ಖಾಲಿ ಜಾಗ ಮತ್ತು ಮನೆಗಳು ಇರುತ್ತವೆ. ಆದರೆ ಅವು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಮೂಲೆಯಲ್ಲಿ ಸುಮಾರು 30 ಮೀಟರ್ ದೂರದಲ್ಲಿ ರಸ್ತೆಯ ಪಕ್ಕ ನನ್ನ ನಿವೇಶನ ಇರುತ್ತದೆ. ಸದರಿ ರಸ್ತೆ ನನ್ನ ನಿವೇಶನದ ಉತ್ತರಕ್ಕೆ ಇರುತ್ತದೆ. ಸದರಿ ರಸ್ತೆಯಿಂದ ಪ್ರತಿವಾದಿಗಳು ಅವರ ಮನೆಗೆ ಬರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**3.** ದಾವಾ ಸ್ವತ್ತುಗಳು ನಮ್ಮ ನಿವೇಶನದ ದಕ್ಷಿಣ ದಿಕ್ಕಿನಲ್ಲಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳ ಕಡೆ ನೀವು ಹೋಗುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ಮಾವ ಬಣಪ್ಪನ ನಿವೇಶನ ಇರುವುದರಿಂದ ನಾನು ಹೋಗಿ ಬರುತ್ತೇನೆ ಎಂದು ಉತ್ತರಿಸಿರುತ್ತಾರೆ. ಈ ಪ್ರಕರಣದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮಾವನಿಗೆ ಸೇರಿದ ಒಂದು ಪ್ರಕರಣ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮಾವನ ಪ್ರಕರಣ ಮತ್ತು ಈ ಪ್ರಕರಣ ಒಂದಕ್ಕೊಂದು

ಪೂರಕವಾಗಿರುವುದರಿಂದ ನನ್ನ ಮಾವನಿಗೆ ಮತ್ತು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**4.** ಪ್ರಸ್ತುತ ದಾವಾ ಸ್ವತ್ತು ಖಾಲಿ ನಿವೇಶನವಾಗಿರುತ್ತವೆ. ದಾವಾ ನಿವೇಶನ ನಂ. 12 ರ ಪೂರ್ವಕ್ಕೆ-ನಿವೇಶನ ನಂ. 11, ಪಶ್ಚಿಮಕ್ಕೆ-ನಿವೇಶನ ನಂ. 13, ಉತ್ತರಕ್ಕೆ ರಮೇಶ್‌ರವರ ಮನೆ, ದಕ್ಷಿಣಕ್ಕೆ-ರಸ್ತೆ ಇರುತ್ತದೆ. ದಾವಾ ನಿವೇಶನ ನಂ. 13 ರ ಪೂರ್ವಕ್ಕೆ-ನಿವೇಶನ ನಂ. 12, ಪಶ್ಚಿಮಕ್ಕೆ-ಸತ್ಯನಾರಾಯಣಶೆಟ್ಟಿರವರ ಮಗನ ಜಮೀನು, ಉತ್ತರಕ್ಕೆ- ದೇವರಾಜ್‌ರವರ ಮನೆ, ದಕ್ಷಿಣಕ್ಕೆ-ರಸ್ತೆ ಇರುತ್ತದೆ.

**5.** ಪ್ರತಿವಾದಿಗಳು ಅಳತೆ ಮಾಡಲು ಅರ್ಜಿ ಸಲ್ಲಿಸಿದಾಗ ಭೂ ಮಾಪಕರು ಸ್ಥಳಕ್ಕೆ ಬಂದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪ್ರತಿವಾದಿಗಳ ಜಮೀನನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಪ್ರತಿವಾದಿಗಳ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ